ಮೆಳೇಕೋಟೆ ನಾಲಾಬದಿ) ನೆಡುತೋಪು	3.00	600	0.450
3) ಹಾಲೇನಹಳ್ಳಿ ನಿಂಗದಹಳ್ಳಿ ನೆಡುತೋಪು	3.00	120	0. 100
4) ರಸೀತಕಲ್ಲು ಮಲ್ಲೆಗೇನಹಳ್ಳಿ ನೆಡುತೋಪು	2. 50	1000	0. 100
ಒಟ್ಟು	54. 50	43,000	31. 108

ದೇವರಾಯನ ದುರ್ಗ ವ್ಯಾಪ್ತಿಯಲ್ಲಿರುವ ಅರಣ್ಯ ಪ್ರದೇಶ

94(244)

ಶ್ರೀ ಎಸ್.ಶಿವಣ್ಣ (ತುಮಕೂರು): ಮಾನ್ಯ ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ತುಮಕೂರು ವಿಧಾನಸಭೆ ಕ್ಷೇತ್ರದ ದೇವರಾಯನ ದುರ್ಗದ ವ್ಯಾಪ್ತಿಯ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು? 95-96ನೇ ಸಾಲಿನಿಂದ ಇದುವರೆಗೆ ಈ ಪ್ರದೇಶದ ಅಭಿವೃದ್ಧಿಗೆ ಖರ್ಚಾದ ಮೊಬಲಗೆಷ್ಟು? (ವರ್ಷವಾರು ಮಾಹಿತಿ ನೀಡುವುದು).

ಆ) ಆ ಪ್ರದೇಶದಲ್ಲಿ 95-96ನೇ ಸಾಲಿನಿಂದ ಇದುವರೆಗೆ ನೆಟ್ಟಗಿಡ ಎಷ್ಟು? ವರ್ಷವಾರು ಗಿಡಗಳ ಜಾತಿವಾರು ಮಾಹಿತಿ ನೀಡುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) 4161.13 ಹೆಕ್ಟೇರು, ಈ ಪ್ರದೇಶದ ಅಭಿವೃದ್ಧಿಗೆ 1995 ರಿಂದ ಖರ್ಚಾದ ಮೊಬಲಗು ಒಟ್ಟು 62.289 ಲಕ್ಷ ರೂ.ಗಳು ವರ್ಷವಾರು ಮಾಹಿತಿ ಈ ಕೆಳಗಿನಂತಿದೆ.

ವರ್ಷ	ಖರ್ಚಾದ ಮೊಬಲಗು (ರೂ. ಲಕ್ಷಗಳಲ್ಲಿ)
1995-96	0.84
1996-97	-
1997-98	22.899
1998-99	13.451
1999-200	25.099 ಇದರಲ್ಲಿ ಕಟ್ಟಡಗಳ ನಿರ್ಮಾಣದ ವೆಚ್ಚವು ಸೇರಿದೆ.
ಒಟ್ಟು	62.289

ಆ) ಆ ಪ್ರದೇಶದಲ್ಲಿ 95-96ನೇ ಸಾಲಿನಿಂದ ಇದುವರೆಗೆ ನೆಟ್ಟ ಗಿಡಗಳ ಸಂಖ್ಯೆ: 76,300 ವರ್ಷವಾರು ಗಿಡಗಳ ಜಾತಿವಾರು ಮಾಹಿತಿ ಈ ಕೆಳಗಿನಂತಿದೆ.

ವರ್ಷ	ಗಿಡಗಳ ಜಾತಿ	ಸಂಖ್ಯೆ
1995-96	ಸಿಸ್ಸು, ಬಂಗಾಳಿ ಜಾಲಿ, ಹೊಂಗೆ, ಹುಣಸೆ	15,000
1996-97	ಯಾವುದೂ ಇಲ್ಲ	-
1997-98	ಬೇವು, ಹೊಂಗೆ, ಹೂವರ್ಸಿ, ಆಲ, ಫೆಲ್ಟೊ ಫಾರಂ, ಗೋಣಿ ಹತ್ತಿ, ಬಸರಿ, ಅರಳಿ	2,800
1998-99	ಕಮರ, ಹುಣಸೇ, ನೆಲ್ಲಿ, ಆಲ, ಹೊಂಗೆ, ತಪಸಿ, ಅಂಟವಾಳ,	52,500
1999-2000	ಹುಣಸೇ, ಬೇವು, ಹೊಂಗೆ, ಅಂಟವಾಳ, ಹೊಳೆಮತ್ತಿ, ಆಲ	6,000
	ಒಟ್ಟು	76,3000

ಅರಣ್ಯ ಇಲಾಖೆ ವತಿಯಿಂದ ಒ. ಐ. ಸಿ. ಎಸ್. ಯೋಜನೆ.